## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | **231/2022** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | **ಶಿವಕುಮಾರ್** | |
| ತಂದೆಯ ಹೆಸರು | **ಕುಮಾರ್** | ಸಾಕ್ಷಿಗೆ ದಿಃ **13.09.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **29 ವರ್ಷ** | |
| ಉದ್ಯೋಗ | **ಕಾರಪೇಯಿಂಟರ್ ಕೆಲಸ** | ಪಿ.ಡಬ್ಲ್ಯೂ **-03** |
| ವಾಸ ಸ್ಥಳ | **ಮೆಟ್ಟಗಳ್ಳಿ, ಮೈಸೂರು** | ಸಿ.ಡಬ್ಲ್ಯೂ **-07** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಮೃತ ನಂಜಮ್ಮ ನನ್ನ ತಾಯಿಯ ತಾಯಿ ಇರುತ್ತಾರೆ. ಆರೋಪಿ 1 ಮತ್ತು 2 ನಮ್ಮ ತಾಯಿಯ ಅಣ್ಣನ ಮಕ್ಕಳು ಇರುತ್ತಾರೆ. ಆರೋಪಿ 3 ಕೂಡಾ ನಮ್ಮ ತಾಯಿಯ ಅಣ್ಣನ ಮಗನು ಇರುತ್ತಾನೆ. ಆರೋಪಿ 4 ನಮ್ಮ ತಾಯಿಯ ಅಣ್ಣನ ಹೆಂಡತಿ ಇರುತ್ತಾರೆ. ನಮ್ಮ ಅಜ್ಜಿ ನಂಜಮ್ಮ ಇವರ ಮನೆಯು ಮೈಸೂರಿನ ಹೆಬ್ಬಾಳನಲ್ಲಿ ಇದೆ, ನಮ್ಮ ಮನೆಯಿಂದ 2 ½ ಕೀ. ಮೀ ದೂರ ಇರುತ್ತದೆ. ನಮ್ಮ ಅಜ್ಜಿ ನಂಜಮ್ಮ ಮತ್ತು ಆರೋಪಿತರು ಮನೆ. 877 ರಲ್ಲಿ ವಾಸ ಮಾಡುತ್ತಿದ್ದರು, ನಮ್ಮ ಅಜ್ಜಿಯು ಸದರಿ ಮನೆಯ 2 ನೇ ಅಂತಸ್ತಿನಲ್ಲಿ ಇರುತ್ತಿದ್ದರು, ಆರೋಪಿತರು 1 ನೇ ಅಂತಸ್ತಿನಲ್ಲಿ ವಾಸವಾಗಿದ್ದರು. ನಮ್ಮ ತಾಯಿಯ ಅಣ್ಣ ಅಂದರೆ ಸೋದರ ಮಾವ ಅಂದಾಜು 10-11 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ಅಜ್ಜಿಯನ್ನು ಆರೋಪಿತರು ಸರಿಯಾಗಿ ನೋಡಿಕೊಳ್ಳದೇ ಇದ್ದುದ್ದರಿಂದ ನಮ್ಮ ಅಜ್ಜಿ ಬೇರೆ ವಾಸ ಮಾಡುತ್ತಿದ್ದರು. ದಿಃ 03.10.2021 ರಂದು ಮಧ್ಯಾಹ್ನ ನಮ್ಮ ಮಾವ ಬಸವಾಚಾರಿ, ಇವರು ನಮ್ಮ ಚಿಕ್ಕಮ್ಮ ಪದ್ಮ ಇವರಿಗೆ ಫೋನ್ ಮಾಡಿ ನೀವು ಮನೆಗೆ ಹೋಗಿ ನೋಡಿ ಯಾವುದೇ ಉತ್ತರ ಬರುತ್ತಿಲ್ಲ ಎಂದು ಹೇಳಿದರು, ನಮ್ಮ ಚಿಕ್ಕಮ್ಮ ಪದ್ಮ ಇವರು ನನಗೆ ಮನೆ ಹತ್ತಿರ ಹೋಗಿ ನೋಡು ಎಂದು ಹೇಳಿದರು. ಸದರಿ ನಮ್ಮ ಚಿಕ್ಕಮ್ಮ ಪದ್ಮ ಇವರು ಬ್ರಹ್ಮಪುರಾ

ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ವಾಸವಾಗಿದ್ದರು. ನಾನು ಮಧ್ಯಾಹ್ನ 1.00 ಗಂಟೆಗೆ ಹೆಬ್ಬಾಳದ ನಮ್ಮ ಅಜ್ಜಿಯ ಮನೆಯ ಹತ್ತಿರ ಹೋಗಿ ಬಾಗಿಲು ತೆಗೆಯಲು ನೋಡಿದೆ ಆರೋಪಿತರು ನನಗೆ ಬಾಗಿಲು ತೆಗೆಯಲು ಬಿಡಲಿಲ್ಲ. ಕಿಟಕಿಯ ಗ್ಲಾಸ್ ಗಳು ಒಡೆದಿದ್ದವು, ಮನೆಯ ಒಳಗಡೆಯಿಂದ ಬೀಗ್ ಹಾಕಿದ್ದು ಇತ್ತು, ಕಿಟಕಿಯಿಂದ ಕೂಗಿದರೆ ನಮ್ಮ ಅಜ್ಜಿ ಯಾವುದೇ ಉತ್ತರ ಕೊಡಲಿಲ್ಲ, ನಮ್ಮ ಮಲಗಿದ್ದನು ನೋಡಿ ನನಗೆ ಸಂಶಯ ಬಂದು, ನಾನು ಎಲ್ಲರಿಗೂ ಫೋನ್ ಮಾಡಿ ತಿಳಿಸಿದೆನು, ಎಲ್ಲರೂ ಮನೆಗೆ ಮಧ್ಯಾಹ್ನ 3.00 ಗಂಟೆಗೆ ಬಂದರು, ನಮ್ಮ ತಮ್ಮ ಬಾಗಿಲು ಕಾಲಿನಿಂದ ಒದ್ದು ಓಪನ್ ಮಾಡಿದ್ದನು ಅದು ಒಳಗಿನಿಂದ ಚೀಲಕ್ ಹಾಕಿರಲಿಲ್ಲ, ಕಿಟಕಿಯ ಕೆಳಗಡೆ ಗ್ಲಾಸಿನ ಚೂರುಗಳು ಬಿದ್ದಿದ್ದವು, ಕೀ ಕೂಡಾ ಬಿದ್ದಿತ್ತು, ಒಳಗಡೆ ಹೋಗಿ ನೋಡಿದಾಗ ನಮ್ಮ ಅಜ್ಜಿ ನಂಜಮ್ಮ ಮೃತಪಟ್ಟದ್ದಳು, ಅವರ ಬಲಗಡೆ ಎದೆ, ಹಣೆಗೆ, ಬಲಗೈ, ಕುತ್ತಿಗೆ ಮತ್ತು ಬಲಗೈ ಹೆಬ್ಬೆರಳು ಮತ್ತು ಬಲಕಾಲಿಗೆ ಗಾಯವಾಗಿದ್ದವು, ಬಲ ಹೆಬ್ಬೆರಳು, ಬಲ ಕಾಲಿನಿಂದ ರಕ್ತ ಬರುತ್ತಿತ್ತು, ಅದನ್ನು ನೋಡಿ ಆರೋಪಿತರು ಹೊಡೆದು ಸಾಯಿಸಿದ್ದಾರೆ ಎಂದು ಸಂಶಯ ಬಂತು, ಬಾಗಿಲು ಹಾಕಿ ಪೊಲೀಸರಿಗೆ ತಿಳಿಸಿದೆವು, ಪೊಲೀಸರು ಸ್ಥಳಕ್ಕೆ ಬಂದು ವಿಚಾರಣೆ ಮಾಡಿ, ಮೃತ ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು.

ಸಾಕ್ಷಿಯು ನಿಪಿ-3 ರಿಂದ ನಿಪಿ-9 ರಲ್ಲಿ ಕಾಣುವ ಶವ ಮತ್ತು ಸ್ಥಳ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಎಂ.ಓ-1 ಮತ್ತು  ಎಂ.ಓ-2 ನೋಡಿ ಗುರುತಿಸಿರುತ್ತಾರೆ. ಆರೋಪಿತರು ನಮ್ಮ ಅಜ್ಜಿ ಜೀವಂತ ಇದ್ದಾಗ ಚಿತ್ರಹಿಂಸೆ ಕೊಡುತ್ತಿದ್ದರು ಎಂದು ಹೇಳಿರುತ್ತಾರೆ, ಸದರಿ ವಿಷಯ ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು :- ಆರೋಪಿ ಪರ ವಕೀಲರಾದ ಎನ್.ಎನ್.ಆರ್ ವಕೀಲರಿಂದಃ-</u>**

ನಾನು ದ್ವಿತೀಯ ಪಿ.ಯು.ಸಿ ವರೆಗೆ ಓದಿರುತ್ತೇನೆ. 4 ನೇ ಆರೋಪಿಯ ಗಂಡ ಸಿದ್ದಾಚಾರಿ ನನಗೆ ಸೋದರ ಮಾವ ಆಗಬೇಕು, ನನ್ನ ತಾಯಿ ನಾಗಮ್ಮ, ಪದ್ಮ, ಇನ್ನೂ ಇಬ್ಬರು ಸಿದ್ದಾಚಾರಿಯ ಸಹೋದರಿಯರು ಇರುತ್ತಾರೆ. ನಮ್ಮ ಮನೆಗೂ ಮತ್ತು

ಸಿದ್ದಾಚಾರಿಯವರ ಮನೆಗೂ 2 ½ ಕೀ. ಮೀ ದೂರ ಇರುತ್ತದೆ. ನಮ್ಮ ಮಾವ ಸಿದ್ದಾಚಾರಿ ಜೀವಂತ ಇದ್ದಾಗ ನಮ್ಮ ಅಜ್ಜಿಯ ಸಲುವಾಗಿ 2 ನೇ ಅಂತಸ್ತಿನಲ್ಲಿ ಒಂದು ಕೋಣೆ ಕಟ್ಟಿಸಿದ್ದರು ಎಂದರೆ ಸರಿ ಇದೆ. ಸಿದ್ದಾಚಾರಿ ಬದುಕಿದಾಗ ನಾವು ಅವರ ಮನೆಗೆ ಹೋಗಿ ಬರುತ್ತಿದ್ದೆವು, ಸಿದ್ದಾಚಾರಿಯರ 4 ಜನ ಸಹೋದರಿಯರು ಸಿದ್ದಾಚಾರಿ ಮೃತಪಟ್ಟ ನಂತರ ಮನೆಯಲ್ಲಿ ಪಾಲು ಬೇಕು ಎಂದು ನಮ್ಮ ಅಜ್ಜಿ ನಂಜಮ್ಮನ ಜೊತೆಗೆ ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಪಾಲು ಕೊಡಿಸುತ್ತೇನೆ ಎಂದು ಅವಳ ಹೆಣ್ಣು ಮಕ್ಕಳಿಗೆ ಸಮಾಧಾನ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಂಜಮ್ಮ ಇವರು ಅವಳ ಹೆಣ್ಣು ಮಕ್ಕಳಿಗೆ ಪಿರ್ತಾರ್ಜಿತ್ ಆಸ್ತಿ ಮಾರಿ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಂಜಮ್ಮ ಇವರು ಕೊಟ್ಟ ಹಣದಿಂದ ಸಿದ್ದಾಚಾರಿ ಮನೆ ಕಟ್ಟಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ, ಮನೆಯು ಸಿದ್ದಾಚಾರಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿತರು ನಂಜಮ್ಮಳಿಗೆ ಚಿತ್ರಹಿಂಸೆ ಕೊಡುತ್ತಿದ್ದರು ಎಂದು ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಮ್ಮ ಅಜ್ಜಿ ನಮ್ಮ ಹತ್ತಿರ ಹೇಳುತ್ತಿದ್ದರು ಎಂದು ಹೇಳುತ್ತಾರೆ. ಸಿದ್ದಾಚಾರಿ ಅವರು ಮೃತಪಟ್ಟ ನಂತರ ನಂಜಮ್ಮ ಇವಳನ್ನು ಆರೋಪಿತರು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 4 ನೇ ಆರೋಪಿತಳು ನಂಜಮ್ಮಳ ಹೆಸರಿನಲ್ಲಿ ರೂ. 49,000/- ಸಾವಿರ ರೂಪಾಯಿ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಎಫ್.ಡಿ ಇಟ್ಟದಳು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಾವು ಕೊಟ್ಟ ಹಣವನ್ನು ನಮ್ಮ ಅಜ್ಜಿ ಹೆಸರಿನಲ್ಲಿ ಎಫ್.ಡಿ ಮಾಡಿದ್ದರು ಎಂದು ಹೇಳುತ್ತಾರೆ. ನಮ್ಮ ಅಜ್ಜಿ ಮೊಮ್ಮಗನನ್ನು ನಾಮೀನಿ ಮಾಡಬೇಕು ಎಂದು 3 ನೇ ಆರೋಪಿತನನ್ನು ಎಫ್.ಡಿ ಗೆ ನಾಮೀನಿ ಮಾಡಿದ್ದರು ಎಂದು ಹೇಳುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವಾಚಾರಿ ನಮಗೆ ಸಂಬಂಧಿಕನಾಗಬೇಕು. ಬಸವಾಚಾರಿಯವರ ಫೋನ್ ನಂಬರ್ ನನಗೆ ಗೊತ್ತಿಲ್ಲ.

ನಾನು ನಮ್ಮ ಅಜ್ಜಿಯ ಮನೆಗೆ 1.00 ಗಂಟೆಗೆ ಹೋಗಿ ನೋಡಿರುತ್ತೇನೆ. ನಮ್ಮ ಅಜ್ಜಿ ವಾಸವಾಗಿದ್ದ ಕೋಣೆಯ ಚೆಕ್ಕು ಬಂದಿ ಕೇಳಿದ್ದಕ್ಕೆ ಸಾಕ್ಷಿಯು ಪೂರ್ವಕ್ಕೆ ಬಾಗಿಲು, ಕಿಟಕಿ, ಪಶ್ಚಿಮಕ್ಕೆ ಗೋಡೆ, ಉತ್ತರಕ್ಕೆ ಬಾತ್‌ರೂಮ, ದಕ್ಷಿಣಕ್ಕೆ ಖಾಲಿ ನಿವೇಶನ ಇರುತ್ತದೆ. ಮನೆಯ ಬಾಗಿಲು ಓಪನ್ ಆದ ನಂತರ ನಮ್ಮ ಚಿಕ್ಕಮ್ಮ ಮೊದಲು ಒಳಗಡೆ ಹೋದರು, ಶವವು ಅಂಗಾತವಾಗಿ ಮಲಗಿತ್ತು, ಕೋಣೆಯ ಬೀಗ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಕೋಣೆಯ ಪೂರ್ವ ಭಾಗದಲ್ಲಿ ಕಿಟಕಿ ಇರುತ್ತದೆ. ಕಿಟಕಿಗೆ ಎರಡು ಬಾಗಿಲು ಇದ್ದವು, ಕಿಟಕಿಗೆ ಯಾವ ತರಹ ಗ್ಲಾಸ್‌ಗಳು ಇದ್ದವು ಎಂದು ಕೇಳಿದ್ದಕ್ಕೆ ಸಾಕ್ಷಿಯು, ಪಿನ್ಸೈಡ್ ಗ್ಲಾಸ್ ಗಳು ಇದ್ದವು ಎಂದು ಹೇಳುತ್ತಾರೆ. ಸದರಿ ಪಿನ್ಸೈಡ್ ಗ್ಲಾಸ್‌ಗಳು ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಕಿಟಕಿ ಗ್ಲಾಸ್‌ಗಳು ಒಡೆದಿರಲಿಲ್ಲ ಎಂದರೆ ಸರಿಯಲ್ಲ. ಕೀ ವಿಚಾರ ಪೊಲೀಸರು ಹೇಳಿದ್ದಕ್ಕೆ ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಇನ್ಸಪೇಕ್ಟರ ರವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ಪೊಲೀಸ್‌ರ ಮುಂದೆ ಮರು ಹೇಳಿಕೆಯನ್ನು ದಿಃ 04.10.2021 ರಂದು ಸಂಜೆ 4 ರಿಂದ 5 ಗಂಟೆಯವರೆಗೆ ಕೊಟ್ಟಿರುತ್ತೇನೆ. ನಾನು ನಮ್ಮ ತಾಯಿ ಮತ್ತು ಚಿಕ್ಕಮ್ಮಂದಿರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮಂದಿರ ಮಾತು ಕೇಳಿ ಆರೋಪಿತರ ವಿರುದ್ಧ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು